# ರಾಜ್ಯ– ರಾಷ್ಟ್ರ

ರಾಷ್ಟ್ರ, ರಾಷ್ಟ್ರೀಯ, ರಾಷ್ಟ್ರಕೂಟ, ರಾಷ್ಟ್ರಪತಿ, ರಾಷ್ಟ್ರಕವಿ – ಇವೇ ಮುಂತಾದ ಮಾತುಗಳನ್ನು ಕೇಳಿರುವುದೂ ಉಂಟು; ಓದಿರುವುದೂ ಉಂಟು. ಪಠ್ಯಪುಸ್ತಕಗಳಲ್ಲಿ ರಾಷ್ಟ್ರಗೀತೆ ಇದೆ. ಹಾಗಾದರೆ, 'ರಾಷ್ಟ್ರ' ಎಂಬ ಮಾತಿನ ಅರ್ಥವ್ಯಾಪ್ತಿ ಏನು? ಎಷ್ಟು? ಎಂಬುದರ ಜಿಜ್ಞಾಸೆಗೆ ತೊಡಗುವುದು ಯುಕ್ತ. ನಾವು ರಾಷ್ಟ್ರದಲ್ಲಿ ಇದ್ದೇವಷ್ಟೆ. ಇಂಗ್ಲಿಷಿನಲ್ಲಿ ರಾಷ್ಟ್ರ ಎಂಬುದಕ್ಕೆ 'ನೇಷನ್' ಎಂದೂ ರಾಜ್ಯ ಎಂಬುದಕ್ಕೆ 'ಸ್ಟೇಟ್' ಎಂದೂ ಕರೆಯುತ್ತೇವೆ. ರಾಜ್ಯಗಳ ಒಕ್ಕೂಟವೇ ರಾಷ್ಟ್ರ. ರಾಜ್ಯವೂ ಖಂಡವ್ಯಾಪ್ತಿಯನ್ನು ಹೊಂದಿದ್ದರೆ; ರಾಷ್ಟ್ರವು ಅಖಂಡ ವ್ಯಾಪ್ತಿಯನ್ನು ಹೊಂದಿದೆ.

ರಾಷ್ಟ್ರ ಎಂಬ ಪದವು ಮೊದಲು ವೇದದಲ್ಲಿ ಕಂಡು ಬರುತ್ತದೆ. ಅಲ್ಲಿ ಶುಭಾಶಂಸನ ಹೇಳುವ ಮಂತ್ರಭಾಗದಲ್ಲಿ ಇದು ಕಂಡು ಬರುತ್ತದೆ. 'ರಾಷ್ಟ್ರಂ ಧಾರಯತಾಂ ಧ್ರುವಮ್' ಎಂದು ಋಗ್ವೇದವೂ 'ರಾಷ್ಟ್ರಂ ವೈ ಭಾರಃ' ಎಂದು ಯಜುರ್ವೇದವೂ 'ತತಃ ರಾಷ್ಟ್ರಂ ಬಲಮೋಜಶ್ಚ ಜಾತಮ್' ಎಂದು ಅಥರ್ವವೇದವೂ ರಾಷ್ಟ್ರಪದದ ಪ್ರಸಕ್ತಿಯನ್ನು ಸಾರುತ್ತದೆ. ಶ್ರುತಿಯಲ್ಲಿ ಬಂದಿರುವ 'ರಾಷ್ಟ್ರ' ಎಂಬುದಕ್ಕೆ 'ಭೂಪ್ರದೇಶ' ಎಂಬ ಅರ್ಥ ಕಂಡು ಬರುತ್ತದೆ. ಶುಭಾಶಂಸನ ಮಂತ್ರಗಳ ಹಿನ್ನೆಲೆಯಲ್ಲಿ ಮನುಷ್ಯ, ಪ್ರಾಣಿ, ಪ್ರಕೃತಿ ಈ ಮೂರನ್ನು ಸೇರಿದಾಗ ರಾಷ್ಟ್ರ ಆಗುತ್ತದೆ. ಜಂಗಮಾತ್ಮಕವಾದ ಪ್ರತಿಯೊಂದು ಪದಾರ್ಥವಿಶೇಷವೂ ಇಲ್ಲಿ ಬಂದಂತಾಯಿತು. 'ರಾಷ್ಟ್ರ' ಎಂಬುದು ಸಮಸ್ತ ಭೂಪ್ರದೇಶವನ್ನೂ ಪ್ರಾಣಿ–ಪಕ್ಷಿ ಪರಿಸರವನ್ನೂ ಮನುಷ್ಯನಾಗರಿಕತೆಯನ್ನೂ ಹೇಳಿದಂತಾಯಿತು!

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಒಂದೊಂದು ಪ್ರದೇಶವೂ 'ರಾಷ್ಟ್ರ' ಎಂಬ ಸಂಜ್ಞೆಯನ್ನು ಹೊಂದಿತ್ತು. ಆಗ ಬ್ರಿಟಿಷ್ ವಸಾಹತುಶಾಹಿಯ ಪ್ರಾಬಲ್ಯವಿದ್ದ ಕಾಲ. ಆ ಕಾಲದಲ್ಲಿ ಹಲವು ಸಂಸ್ಥಾನಗಳು ಇದ್ದುವು. ಅವು ರಾಷ್ಟ್ರ ಎಂದು ಕರೆಸಿಕೊಳ್ಳುತ್ತಿದ್ದವು. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ದಂಡಸಂಹಿತೆಯನ್ನು ಕುರಿತು ಹೇಳುವಾಗ ದೇಶೀಯ–ವಿದೇಶಿಯ ಎಂಬ ಮಾನದಂಡಗಳನ್ನು ಬಳಸುತ್ತಾನಷ್ಟೆ. ಅಂಗಕ್ಕೆ ವಂಗವು ವಿದೇಶೀಯವಾದರೆ; ವಂಗಕ್ಕೆ ಕಲಿಂಗವು ವಿದೇಶೀಯ. ಅರ್ಥಾತ್ ಒಂದಕ್ಕೆ ಮತ್ತೊಂದು ವಿದೇಶ. ಪ್ರಾಚೀನ ಭಾರತದಲ್ಲಿ ಹತ್ತಾರು ಭೂಪ್ರದೇಶಗಳಿದ್ದವು; ಹತ್ತಾರು ಜನವಸತಿ ಕೇಂದ್ರಗಳಿದ್ದವು. ನಮ್ಮ ಕನ್ನಡಕಾವ್ಯಗಳಲ್ಲಿ ಅನೇಕ 'ರಾಷ್ಟ್ರ'ಗಳ ಹೆಸರುಗಳನ್ನು ಬಳಸಲಾಗಿದೆ. ಅಂಗ, ವಂಗ, ಕಲಿಂಗ, ಪಾಂಡ್ಯ, ಚೇರ, ಕುಂತಳ, ಲಾಟ, ಪುನ್ನಾಟ – ಎಂಬಂಥ ಮಾತುಗಳಿವೆ. ಇವು ಒಂದೊಂದೂ ರಾಷ್ಟ್ರವೇ. ಪೂರ್ವಕಾಲದಲ್ಲಿ ಒಂದು ಭೂಭಾಗವನ್ನು ರಾಜ ಆಳುತ್ತಿದ್ದನಷ್ಟೆ. ಆ ಭೂಭಾಗಕ್ಕೆ ರಾಷ್ಟ್ರವೆಂದೂ ದೇಶವೆಂದೂ ನಾಡೆಂದೂ ಪ್ರಾಂತ್ಯವೆಂದೂ ಕರೆಯಲಾಗುತ್ತಿತ್ತು. ಈ ಅರ್ಥದಲ್ಲಿ ಚಾಣಕ್ಯನು ದೇಶೀಯ ಮತ್ತು ವಿದೇಶಿಯ ಎಂಬ ಪರಿಕಲ್ಪನೆಗಳನ್ನು ಬಳಸುತ್ತಿದ್ದಾನೆ. ಅಭಿನವ ಮಂಗರಾಜನು ತನ್ನ ನಿಘಂಟಿನಲ್ಲಿ 'ವಸುಮತೀಶರಿಗೆ ತಮಗೆನಿತು ಮಹಿಯುಂಟದರ ಪೆಸರು ರಾಷ್ಟ್ರಂ' ಎಂದು ಹೇಳಿರುವ ಮಾತನ್ನು ಗಮನಿಸಿದರೆ, ಪೂರ್ವಕಾಲದಲ್ಲಿ 'ರಾಷ್ಟ್ರ'ವೆಂದರೆ ಭೂಭಾಗಮಾತ್ರವೆಂದೇ ಅರ್ಥವಾಗುತ್ತದೆ.

ಮೇಲಿನ ಮಾತನ್ನು ಮುಂದುವರೆಸಿ ಹೇಳಬಹುದಾದರೆ: ಪ್ರಾಚೀನ ಕಾಲದಲ್ಲಿ ರಾಜ್ಯ ಮತ್ತು ರಾಷ್ಟ್ರ ಎಂಬ ಪದಗಳು ಸಮಾನಾರ್ಥಕಗಳಾಗಿಯೇ ಬಳಕೆಯಾಗುತ್ತಿತ್ತೆಂಬುದು ಸುನಿಶ್ಚಿತ. ಮೂಲದಲ್ಲಿ 'ರಾಜ್ಯ' ಎಂಬ ಪದಕ್ಕೆ ಆಡಳಿತ ಎಂಬ ಅರ್ಥವೇ ಬಳಕೆಯಲ್ಲಿತ್ತು. 'ರಾಜ್ಞಃ ಕರ್ಮ ರಾಜ್ಯಮ್' ಎಂಬುದು ಅದರ ಅರ್ಥ ವಿವರಣೆ! ಅನಂತರ ಎಷ್ಟೋ ಕಾಲಾನಂತರದಲ್ಲಿ 'ರಾಜ'ನ ಆಡಳಿತಕ್ಕೆ ಒಳಪಟ್ಟ ಭೂಭಾಗ ಎಂಬ ಅರ್ಥವನ್ನು ಅದು ಒಳಗೊಂಡಿತು. 'ರಾಷ್ಟ್ರ' ಎಂಬುದಕ್ಕೂ ಅದೇ ಅರ್ಥ ಒದಗಿತು. ಪ್ರಾಚೀನ ಸಂಸ್ಕೃತಕೋಶಗಳಲ್ಲಿ ಒಂದಾದ 'ವೈಜಯಂತೀಕೋಶ'ವು "ರಾಷ್ಟ್ರಂ ತು ವಿಷಯಃ ಸೋಪಿ ಯುಕ್ತೋ ಗ್ರಾಮೈಃ ಶತಾಧಿಕೈಃ' ಎನ್ನುತ್ತದೆ. ಇದರ ಅರ್ಥ 'ನೂರಕ್ಕೂ ಹೆಚ್ಚು ಹಳ್ಳಿಗಳಿದ್ದರೆ ಅದು ರಾಷ್ಟ್ರ'. ಒಂದು ಅಚ್ಚರಿಯ ಸಂಗತಿಯೆಂದರೆ: ರಾಜ್ಯ–ರಾಷ್ಟ್ರ ಒಂದೇ ಮೂಲದಿಂದ ಬಂದ ಪದಗಳೆಂಬುದನ್ನು ನಾವು ಗಮನಿಸಬೇಕು. ರಾಜ್ಯಧಾತುವಿಗೆ ಶೋಭೆ ಎಂಬ ಅರ್ಥವುಂಟು. ಪಾಣಿನಿ ಈ ಅರ್ಥವನ್ನು ಒಪ್ಪಿದ್ದಾನೆ. ರಾಜನು ಶೋಭಿಸಿದರೆ; ರಾಷ್ಟ್ರವು ಶೋಭಿಸುತ್ತದೆ. ಸಾಮಾನ್ಯವಾಗಿ ಎಲ್ಲರೂ ಇದನ್ನು ಗ್ರಹಿಸಿದ್ದಾರೆ. ಆದರೆ, ಕಾಳಿದಾಸನು ರಘುವಂಶ ಮಹಾಕಾವ್ಯದಲ್ಲಿ 'ರಾಜಾ ಪ್ರಕೃತಿರಂಜನಾತ್' ಎಂದು ಹೇಳಿದ್ದಾನೆ. ಪ್ರಜೆ ಮತ್ತು ನಿಸರ್ಗ ಇವು ಪ್ರಕೃತಿ. ಇವುಗಳನ್ನು ಸಂತಸವಾಗಿ ಇಡುವವನೇ ರಾಜ. ಅವನೇ 'ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ' ಎಂದು ಕಾಳಿದಾಸ ಉದ್ಘೋಷಿಸಿದ. ರಾಜರು ಪ್ರಕೃತಿಯ ಹಿತಸಾಧನೆಯಲ್ಲಿ ತೊಡಗುವಂತಾಗಲಿ ಎಂಬುದೇ ಅವನ ಮಾತು. ಈ ಮಾತನ್ನು ಮುಂದುವರೆಸಿ ಶ್ರೀಮನ್ಮಹಾಭಾರತದಲ್ಲಿ ವ್ಯಾಸರು 'ಮೃತಂ ರಾಷ್ಟ್ರಂ ಅನಾಯಕಮ್' ಎಂಬ ಅರ್ಥಗರ್ಭಿತವಾದ ಮಾತೊಂದನ್ನು ಆಡಿದ್ದಾರೆ. ಇದರ ಅರ್ಥಃ 'ನಾಯಕನಿಲ್ಲದ ರಾಷ್ಟ್ರ ಸಾವನ್ನು ಕಂಡಿತು'. ಸಮರ್ಥರಾದ ನಾಯಕರು ಇಲ್ಲದೆ ಹೋದರೆ ಅನಾಯಕವಲ್ಲದೆ ಇನ್ನೇನು?

ನಮ್ಮ ರಾಷ್ಟ್ರವು ಆಧುನಿಕತೆಗೆ ತೆರೆದುಕೊಂಡಿತು. ನಾವು ಬ್ರಿಟೀಷರ ಪಾರತಂತ್ರ್ಯದಿಂದ ಹೊರಬಂದಾಗ ರಾಜ್ಯ, ರಾಷ್ಟ್ರ ಎಂಬ ಮಾತುಗಳನ್ನು ಪ್ರಜಾವರ್ಗ ಮತ್ತು ಭೌಗೋಳಿಕ ಪ್ರದೇಶ ಎಂಬ ಸಮಾನಾರ್ಥದಲ್ಲಿಯೇ ಬಳಕೆಮಾಡಿದೆವು. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಭಿನ್ನ ಅರ್ಥಕ್ಕೆ ಅದು ಜಾರಿತು. ಸಂಸ್ಕೃತ ಭಾಷೆಯಲ್ಲಿ ರಾಷ್ಟ್ರಕ್ಕೆ ಸೇರಿದ ಪ್ರಜೆಯನ್ನು ರಾಷ್ಟ್ರೀಯ ಎಂದು ಕರೆಯುತ್ತಾರೆ. ಇದು ಗಮನಾರ್ಹ. ಆದರೆ, ಕನ್ನಡದಲ್ಲಿ ಬಹುಕಾಲದಿಂದ 'ರಾಷ್ಟ್ರೀಯ' ಎಂಬ ಪದ ರೂಢಿಯಲ್ಲಿ ಉಳಿದುಕೊಂಡಿದೆ. ಬಸವಪ್ಪ ಶಾಸ್ತ್ರಿಗಳು 'ಕರ್ಣಾಟ ಶಾಕುಂತಲನಾಟಕಮ್' ಕೃತಿಯಲ್ಲಿ 'ಆರ್ಯನೆ, ರಾಷ್ಟ್ರೀಯನಾದ ಮಿತ್ರಾವಸುವು ಮಹಾರಾಜನ ಸನ್ನಿಧಿಯಿಂದ ಇಲ್ಲಿಗೆ ನಮ್ಮನ್ನು ಕಳುಹಿಸಿ ಕೆಲವು ದಿನಗಳಾದುವು' ಎಂಬ ಮಾತು ಬಂದಿದೆ. ಇಲ್ಲಿ 'ರಾಷ್ಟ್ರೀಯ' ಎಂಬ ಪದ ಪ್ರಯೋಗಗೊಂಡಿದೆ. ಇಲ್ಲಿ ಮಿತ್ರಾವಸು ರಾಷ್ಟ್ರೀಯ. ಈತ ದುಷ್ಯಂತನ ಹಿರಿಯ ಹೆಂಡತಿಯ ಸೋದರ. ಆತ ಹಸ್ತಿನಾವತಿಯ ನಗರಾಭಿವೃದ್ಧಿ ಸಚಿವ ಆಗಿದ್ದನೆಂದು ವ್ಯಾಖ್ಯಾನಕಾರರು ಅಭಿಪ್ರಾಯ ಪಟ್ಟಿದ್ದಾರೆ! ರಾಷ್ಟ್ರಕ ಎಂದರೆ ಪ್ರಜೆ. ಪಾರಮಾರ್ಥಿಕ ವಿಷಯಗಳಿಗಿಂತ; ಲೌಕಿಕಕ್ಕೆ ಹೆಚ್ಚು ಗಮನ ಕೊಟ್ಟರೆ ರಾಷ್ಟ್ರಕ, ಪೂಜ್ಯ ಡಿವಿಜಿ ಅವರು 'ವಿರಕ್ತರಾಷ್ಟ್ರಕ' ಎಂದೇ ಖ್ಯಾತರು.

ಒಟ್ಟಿನಲ್ಲಿ ರಾಜ್ಯ, ರಾಷ್ಟ್ರ, ಎಂಬುದು ಹಲವು ಅವಸ್ಥಾಂತರಗಳನ್ನು ಪಡೆದು ಬಂದಿತು. ನಾವು ಏಕಕಾಲದಲ್ಲಿ ರಾಜ್ಯದಲ್ಲೂ ಇದ್ದೇವೆ; ರಾಷ್ಟ್ರದಲ್ಲೂ ಇದ್ದೇವೆ. ರಾಜ್ಯಗಳು ಬೇರೆಬೇರೆಯಾದರೂ ರಾಷ್ಟ್ರ ಒಂದೇ ಎಂಬ ಪ್ರಜ್ಞೆ ನಮ್ಮ ಮನಸ್ಸಿನಲ್ಲಿ ಸದಾ ಇರಬೇಕು. ನಮ್ಮ ದೇಶ ಸಂವಿಧಾನ ಬದ್ಧವಾದಾಗ ರಾಷ್ಟ್ರಪಕ್ಷಿ, ರಾಷ್ಟ್ರಪತಿ, ರಾಷ್ಟ್ರಗೀತೆ, ರಾಷ್ಟ್ರಭಾಷೆ ಪ್ರಾಚಲ್ಯಕ್ಕೆ ಬಂದಿತು. ಹೀಗಾಗಿ ನಾವು ರಾಷ್ಟ್ರಕರು!

■ ಪುರಂಜೀವಿ

## ಮಾತೇ ಮುತ್ತು

- ನಿಮ್ಮ ಬಳಿ ಸುತ್ತಿಗೆ ಮಾತ್ರ ಇದ್ದಾಗ ಪ್ರತಿ ಸಮಸ್ಯೆಯೂ ಮೊಳೆಯಂತೆ ಕಾಣುವುದು.
  –ಅಬ್ರಾಹಂ ಮ್ಯಾಸ್ಲೋವ್

ಶುರು ಮಾಡಲು ಶ್ರೇಷ್ಠನಾಗಿರಬೇಕಿಲ್ಲ, ಆದರೆ ಶ್ರೇಷ್ಠನಾಗಲು ಶುರು ಮಾಡಬೇಕು.
–ಝಿಗ್ ಝಿಗ್ಲಾರ್

- ನಮ್ಮ ನಿರ್ಧಾರಗಳು ಕೆಲವೊಮ್ಮೆ ಸೂಕ್ತವಾಗಿ ಇರುವುದಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಂತಹ ವೈಫಲ್ಯವನ್ನು ಅರ್ಥ ಮಾಡಿಕೊಳ್ಳುವುದು ಯಶಸ್ಸಿನ ಒಂದು ಭಾಗವೇ ಆಗಿರುತ್ತದೆ.
  –ಅರಿಯನ್ನಾ ಹಫಿಂಗ್ಟನ್

- ಜೀವನ ಎಂಬುದು ಸೈಕಲ್ ಸವಾರಿ ಇದ್ದಂತೆ, ಸಮತೋಲನ ಇರಬೇಕು ಎಂದರೆ ಚಲಿಸುತ್ತಲೇ ಇರಬೇಕು.
  –ಐನ್‌ಸ್ಟೀನ್

- ಜೀವಿಸುವುದಕ್ಕಾಗಿ ಸಂಪಾದಿಸಬೇಕೇ ಹೊರತು ಸಂಪಾದನೆಯೇ ಜೀವನ ಆಗಬಾರದು.
  –ಸರ್. ಎಂ. ವಿಶ್ವೇಶ್ವರಯ್ಯ